**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

**ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.**

**ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.**

**-ಸಂ.**

## ಚಿಂತನ

ಸನಾತನ ಪರಂಪರೆ ಹೊಂದಿರುವ ಈ ಭಾರತೀಯ ಸಂಸ್ಕೃತಿಗೆ ಇಂದು ಏನಾಗುತ್ತಿದೆ? ಋಷಿಮುನಿಗಳ ಕಾಲದಿಂದಲೂ ಅತ್ಯಂತ ಪವಿತ್ರತೆ ಮತ್ತು ಉತ್ಕೃಷ್ಟತೆಯನ್ನು ಹೊಂದಿದ ಈ ಭಾರತೀಯ ಸಂಸ್ಕೃತಿಯು ಇಂದು ಅದನ್ನು ಉಳಿಸಿಕೊಳ್ಳುವಲ್ಲಿ ಹಿನ್ನಡೆ ಪಡೆಯುತ್ತಿದೆಯೇ?

ಈ ವಿಶ್ವ ಕಂಡ ಹಲವು ನಾಗರೀಕತೆಗಳಲ್ಲಿ ರೋಮನ್ ನಾಗರೀಕತೆಗಳು ಹೆಚ್ಚು ಕಾಲ ಬಾಳಲಿಲ್ಲ. ಮೆಕ್ಸಿಕೋದ ಮಾಯಾ ನಾಗರಿಕತೆಯು ಈಗ ಇಲ್ಲವಾಗಿದೆ. ಚೀನಾ ನಾಗರಿಕತೆ ಕೂಡಾ ಇತ್ತೀಚೆಗೆ ಹಿನ್ನಡೆಯುತ್ತದೆಂದು ತಿಳಿದು ಬಂದಿದೆ. ಹೀಗಿದ್ದೂ ಈ ಭವ್ಯ ಪರಂಪರೆಯ ಭಾರತೀಯ ಸಂಸ್ಕೃತಿಯು 5000 ವರ್ಷಗಳ ಇತಿಹಾಸದಲ್ಲಿಯೂ ತನ್ನತನವನ್ನು ಉಳಿಸಿಕೊಂಡಿದೆ.

ಇದಕ್ಕೆ ಕಾರಣವೇನು? ಈ ಭಾರತೀಯ ಸಂಸ್ಕೃತಿಯು ಉಗಮವೇ ಋಷಿಮುನಿಗಳ ಆಶ್ರಮದಲ್ಲಿ. ಅಂತಹ ಆಶ್ರಮಗಳಿದ್ದುದ್ದು ಕಾಡಿನ ನಡುವೆ ಆ ಋಷಿಮುನಿಗಳಾದರೂ ತನ್ನ ಶಿಷ್ಯವರ್ಗವನ್ನು ಕೂಡಿಕೊಂಡು ಜೀವನಾವಶ್ಯಕವಾದ ಮೂಲಭೂತ ವಸುಗಳಿಂದಲೇ ತೃಪ್ತರಾಗಿ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿರುತ್ತಾರೆ. ಸಾತ್ವಿಕ ಆಹಾರ ಸೇವನೆ, ಸುಸಂಸ್ಕೃತ ಆಚಾರ-ವಿಚಾರ, ಅತಿಥಿ ಸತ್ಕಾರ, ಪ್ರಾಣಿದಯೆ, ಯಜ್ಞಯಾಗಾದಿ ಗಳಿಂದ ದೇವತಾರಾಧನೆ ಮೊದಲಾದವುಗಳಿಂದ ಆಶ್ರಮದ ವಾತಾವರಣವೇ ಈ ಭವ್ಯ ಸಂಸ್ಕೃತಿ ಬೆಳೆಯಲು ಪ್ರೇರಣೆಯಾಗಿತ್ತು.

ಇತ್ತೀಚೆಗೆ ನಾವು ಏಕೆ ಈ ಸಂಸ್ಕೃತಿಯಿಂದ ದೂರ ಸರಿಯುತ್ತಿದ್ದೇವೆ? ಮುಖ್ಯವಾಗಿ ನಮ್ಮದಲ್ಲದ ಇತರ ಸಂಸ್ಕೃತಿಗಳ ಅನುಕರಣೆ; ನಿಯಮ ಶಿಸು ಇಲ್ಲದ ಸ್ವತಂತ್ರತೆ ಆ ಸಂಸ್ಕೃತಿಯತ್ತ ಆಕರ್ಷಿತರಾಗಲು ಕಾರಣವಿರಬಹುದು. ಅಲ್ಲದೆ ಸಾತ್ವಿಕವಲ್ಲದ ಆಹಾರ ಸೇವನೆ ಮತ್ತು ಕಾಡಿನ ಪ್ರಶಾಂತ ವಾತಾವರಣವನ್ನು ಬಿಟ್ಟು ನಗರದ ಸಿಮೆಂಟು ಕಾಡು ಹಾಗೂ ಗದ್ದಲಗಳ ಬೀಡಿನಲ್ಲಿ ವಾಸವ್ಯ ಮಾಡುವ ಅನಿವಾರ್ಯತೆಯೂ ಇದಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತದೆ.

ನಮ್ಮ ವಾಸ್ತವ್ಯವನ್ನು ಕಾಡಿನ ಮಧ್ಯದಲ್ಲಿ ಮಾಡಲು ಇನ್ನು ಸಾಧ್ಯವೇ? ಈ ಭೂಮಿಯ ಮೇಲೆ ನಗರೀಕರಣದ ವೈಭವವಿದ್ದರೂ ಮನೆಯೊಳಗೆ ಆಶ್ರಮದ ವಾತಾವರಣ ಸೃಷ್ಟಿಸಲು ಸಾಧ್ಯವಿಲ್ಲವೇ. ನಮ್ಮ ಮುಂದಿನ ಪೀಳಿಗೆ ಈ ಸನಾತನ ಆಚಾರ-ವಿಚಾರಗಳನ್ನು ತಿಳಿಸಿ ಅದನ್ನು ಪಾಲಿಸುವಂತೆ ಮಾಡುವಲ್ಲಿ ನಾವು ಸಫಲತೆಯನ್ನು ಸಾಧಿಸೋಣ.

ಆ ಮೂಲಕ ಪ್ರಾಚೀನ ಪರಂಪರೆಯ ಭಾರತೀಯ ಸಂಸ್ಕೃತಿಯ ಒಳ-ಹೊರಗನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ಉಳಿಸಿಕೊಳ್ಳುವಂತೆ ಮಾಡೋಣ.

# ವೇದವೇದಾಂಗಗಳೆಂದರೇನು?

**-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು**

(ಹಿಂದಿನ ಸಂಚಿಕೆಯಿಂದ....)

ಋಗ್ವೇದಕ್ಕೆ ಐತರೇಯೋಪನಿಷತ್ತು ಎಂಬ ಒಂದೇ ಉಪನಿಷತ್ತು ದೊರೆತಿದೆ. ಇದೊಂದು ಪುಟ್ಟ ಉಪನಿಷತ್ತು. ಇದರಲ್ಲಿ ಮೂರು ಅಧ್ಯಾಯಗಳಿವೆ.

**ಯಜುರ್ವೇದ :**

'ಯಜ=ದೇವಪೂಜಾಸಂಗತಿಕರಣಯಜನದಾನೇಷು' ಎಂಬ ಧಾತುವಿನಿಂದ ಬಂದಿರುವ ಶಬ್ದ ಯಜುಸ್. ಅದು ದೇವರಪೂಜೆ, ಸಹಯೋಗ, ಯಜ್ಞಮಾಡುವುದು, ದಾನಮಾಡುವುದು ಎಂಬ ಅರ್ಥಗಳನ್ನೊಳಗೊಂಡಿದೆ. ಆದರೆ ಯಜ್ಞದ ಅಧ್ವರ್ಯುವಿಗೆ ಪ್ರಯೋಜನಕಾರಿಯಾದುದೆಂದೇ 'ಯಜುಸ್' ಶಬ್ದದ ಅರ್ಥರೂಢವಾಗಿದೆ. ಮುಖ್ಯವಾಗಿ ಇದು ಕ್ರಿಯಾರೂಪ. ಋಗ್ವೇದ ಛಂದೋಬದ್ಧವಾಗಿದ್ದರೆ ಇದು ಗದ್ಯಾತ್ಮಕವಾಗಿದೆ. ಗದ್ಯಾತ್ಮಕೋಯಜುಃ, ಅನಿಯತಾಕ್ಷರಾವಸಾನೋ ಯಜುಃ - ಎಂಬ ಮಾತುಗಳಿಗೆ ಇದೇ ಅರ್ಥ.

ಯಜುರ್ವೇದ ಎರಡು ವಿಧ- ಕೃಷ್ಣ ಯಜುರ್ವೇದ ಮತ್ತು ಶುಕ್ಲಯಜುರ್ವೇದ. ಕೃಷ್ಣ ಯಜುರ್ವೇದವು ಬ್ರಹ್ಮಸಂಪ್ರದಾಯದ್ದೆಂದೂ, ಶುಕ್ಲ ಯಜುರ್ವೇದವು ಆದಿತ್ಯ ಸಂಪ್ರದಾಯದ್ದೆಂದೂ ಹೇಳುತ್ತಾರೆ. ಇಲ್ಲೊಂದು ಕಥೆ ಪ್ರಸಿದವಾಗಿದೆ. ವೇದವ್ಯಾಸರು ವೇದಗಳನ್ನು ವಿಂಗಡಿಸಿ ಕ್ರಮವಾಗಿ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಎಂಬ ಶಿಷ್ಯರಿಗೆ ಉಪದೇಶಿಸಿದರಷ್ಟೇ? ವೈಶಂಪಾಯನರು ಯಾಜ್ಞವಲ್ಕ್ಯ ಮೊದಲಾದ ಶಿಷ್ಯರಿಗೆ ಯಜುರ್ವೇದವನ್ನು ಹೇಳಿ ಕೊಟ್ಟರು. ಒಮ್ಮೆ ವೈಶಂಪಾಯನರ ಆಜ್ಞೆಯನ್ನು ಯಾಜ್ಞವಲ್ಕ್ಯರು ಮನ್ನಿಸದಿರಲು ತಾನು ಹೇಳಿಕೊಟ್ಟ ವಿದ್ಯೆಯನ್ನು ಹಿಂತಿರುಗಿಸುವಂತೆ ಕೇಳುತ್ತಾರೆ. ಆಗ ಯಾಜ್ಞವಲ್ಕ್ಯರು ಯಜುರ್ವೇದವನ್ನು ವಾಂತಿ ಮಾಡಿದರು. ಅದು ಕರ್ರಗಿತ್ತು. ವೈಶಂಪಾಯನರು ತನ್ನ ಇತರ ಶಿಷ್ಯರನ್ನು ತಿತ್ತಿರಿಪಕ್ಷಿಗಳಾಗಿ ಅದನ್ನು ಸ್ವೀಕರಿಸಲುಹೇಳಿದರು. ಹೀಗೆ ಕೃಷ್ಣಯಜುರ್ವೇದ ವಾಯಿತು. ತಿತ್ತಿರಿಪಕ್ಷಿಗಳಿಂದಾಗಿ ತೈತ್ತಿರೀಯ ಸಂಹಿತೆಯೂ ಆಯಿತು. ಯಾಜ್ಞವಲ್ಕ್ಯರು (ಇವರು ನಿಜವಾಗಿಯೂ ವೈಶಂಪಾಯನರ ಸೋದರಳಿಯ) ಗುರುಗಳಿಂದ ತಿರಸ್ಕೃತರಾಗಿ ಸೂರ್ಯನನ್ನು ಕುರಿತು ತಪಸ್ಸು ಮಾಡಿದರು. ಸೂರ್ಯನು ಕುದುರೆಯ (ವಾಜಿಯ) ರೂಪದಲ್ಲಿ ಪ್ರತ್ಯಕ್ಷನಾಗಿ ಯಾಜ್ಞವಲ್ಕ್ಯರಿಗೆ ಯಜುರ್ವೇದವನ್ನು ಬೋಧಿಸಿದನು. ಇದೇ ಶುಕ್ಲಯಜುರ್ವೇದ. ಇದನ್ನೇ ವಾಜಸನೇಯ ಸಂಹಿತೆಯೆಂದೂ ಹೇಳಲಾಗಿದೆ.

ವಸ್ತುತಃ ಕೃಷ್ಣಯಜುರ್ವೇದದಲ್ಲಿ ಬ್ರಾಹ್ಮಣಾಂಶಗಳೂ ಬೆರೆತಿವೆ. ಶುಕ್ಲಯಜುರ್ವೇದ ಕೇವಲ ಮಂತ್ರಗಳಿಂದ ಕೂಡಿದೆ. ಋಗ್‌ವೇದದಂತೆ ಯಜುರ್ವೇದಕ್ಕೂ ಸ್ವರಗಳಿವೆ. ಆದರೆ ಯಜುರ್ವೇದದಲ್ಲಿ ಗಾನದ ಮಾಧುರ್ಯವಿದೆ. ಇದಕ್ಕೇ ಯಜುರ್ವೇದ ಇಂಪಾಗಿ ಕೇಳಿಸುವುದು.

ಕೃಷ್ಣ ಯಜುರ್ವೇದಕ್ಕೆ 86 ಶಾಖೆಗಳಿದ್ದವೆಂದು ಚರಣವ್ಯೂಹ ಪರಿಶಿಷ್ಟದಲ್ಲಿ ಹೇಳಿದೆ. ಆದರೆ ಇಂದು ಕೇವಲ ನಾಲ್ಕು ಶಾಖೆಗಳು ಉಪಲಬ್ಧವಾಗಿವೆ. ವಿವಿಧ ಶಿಷ್ಯರೇ ವಿವಿಧ ಶಾಖೆಗಳಿಗೆ ಕಾರಣಕರ್ತೃಗಳೆಂದು ಕಾಣುತ್ತದೆ. ಆ ನಾಲ್ಕು ಶಾಖೆಗಳು ತೈತ್ತಿರೀಯ, ಮೈತ್ರಾಯಣೀಯ ಅಥವಾ ಕಾಲಾಪ, ಕಠ, ಕಪಿಷ್ಠಲ. ತೈತ್ತಿರೀಯ ಶಾಖೆ ದಕ್ಷಿಣ ಭಾರತದಲ್ಲಿ ರೂಢಿಯಲ್ಲಿದೆ. ಇದಕ್ಕೆ ಇದರದ್ದೇ ಆದ ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಶ್ರೌತಸೂತ್ರ ಮತ್ತು ಗೃಹ್ಯಸೂತ್ರಗಳೂ ಇವೆ. ಇದರಲ್ಲಿ ಏಳುಕಾಂಡಗಳು, 44 ಪ್ರಪಾಠಕಗಳು ಮತ್ತು 651 ಅನುವಾಕಗಳಿವೆ.

ಮೈತ್ರಾಯಣೀಯದಲ್ಲಿ ನಾಲ್ಕು ಕಾಂಡಗಳಿವೆ. ಇದರಲ್ಲಿರುವ ಒಟ್ಟು 2144 ಮಂತ್ರಗಳಲ್ಲಿ 1701 ಮಂತ್ರಗಳನ್ನು ಋಗ್ವೇದದಿಂದಲೇ ತೆಗೆದುಕೊಳ್ಳಲಾಗಿದೆ.

ಕಠಶಾಖೆಯಲ್ಲಿ ಐದು ಕಾಂಡಗಳಿವೆ. ಇದರಲ್ಲಿ 40 ಸ್ಥಾನಕಗಳೂ, 13 ಅನುವಚನಗಳೂ, 843 ಅನುವಾಕಗಳೂ, 3091 ಮಂತ್ರಗಳೂ ಇವೆ.

ಕಪಿಷ್ಠಲ ಶಾಖೆಯಲ್ಲಿ ಅಷ್ಟಕಗಳಿವೆ. ಇದು ಸಮಗ್ರವಾಗಿ ದೊರೆತಿಲ್ಲ.

ಶುಕ್ಲ ಯಜುರ್ವೇದಕ್ಕೆ 17 ಶಾಖೆಗಳಿವೆಯೆನ್ನುತ್ತಾರೆ. ಇವುಗಳಲ್ಲಿ ಕಾಣ್ವ ಮತ್ತು ಮಾಧ್ಯಂದಿನ ಶಾಖೆಗಳು ಪ್ರಸಿದ್ಧವಾಗಿವೆ. ಕಾಣ್ವ ಶಾಖೆ ದಕ್ಷಿಣ ಭಾರತದಲ್ಲೂ, ಮಾಧ್ಯಂದಿನ ಉತ್ತರ ಭಾರತದಲ್ಲೂ ಪ್ರಚಲಿತವಾಗಿವೆ.

ಕೃಷ್ಣಯಜುರ್ವೇದಕ್ಕೆ ತೈತ್ತಿರೀಯ ಬ್ರಾಹ್ಮಣವಿದೆ. ಕಾಠಕಬ್ರಾಹ್ಮಣವಿದ್ದರೂ ಅದು ಉಪಲಬ್ಧವಿಲ್ಲ. ತೈತ್ತಿರೀಯ ಬ್ರಾಹ್ಮಣದಲ್ಲಿ ಮೂರು ಕಾಂಡಗಳಿವೆ. ಮೊದಲನೆಯ ಎರಡು ಕಾಂಡಗಳನ್ನು ಅಷ್ಟಕಗಳೆನ್ನುವುದೂ ಇದೆ. ಇವುಗಳಲ್ಲಿ ಎಂಟೆಂಟು ಪ್ರಪಾಠಕಗಳಿರುವುದರಿಂದ ಅಷ್ಟಕಗಳೆಂಬ ಹೆಸರು ಬಂದಿರಬಹುದು. ಮೂರನೆಯ ಕಾಂಡದಲ್ಲಿ 12 ಪ್ರಪಾಠಕಗಳಿವೆ.

ಶುಕ್ಲಯಜುರ್ವೇದದ ಶತಪಥಬ್ರಾಹ್ಮಣ ಬಹಳ ಪ್ರಸಿದ್ಧವೂ, ವಿಸ್ತರವೂ ಆಗಿದೆ. ಇದರಲ್ಲಿ ನೂರು ಅಧ್ಯಾಯಗಳಿವೆ. ಆದುದರಿಂದಲೇ ಇದನ್ನು ಶತಪಥವೆಂದು ಕರೆಯಲಾಗಿದೆ.

ಕೃಷ್ಣಯಜುರ್ವೇದದ ಆರಣ್ಯಕ ಮೈತ್ರಾಯಣೀಯ. ಶುಕ್ಲಯಜುರ್ವೇದಕ್ಕೆ ಬೃಹದಾರಣ್ಯಕವಿದೆ. ಮೈತ್ರಾಯಣೀಯ ಮತ್ತು ಬ್ರಹದಾರಣ್ಯಕಗಳು ಉಪನಿಷತ್ತುಗಳನ್ನೂ ಒಳಗೊಂಡಿವೆ.

ಕೃಷ್ಣಯಜುರ್ವೇದಕ್ಕೆ ಕಠೋಪನಿಷತ್ತು ಮತ್ತು ಶ್ವೇತಾಶ್ವರೋಪನಿಷತ್ತುಗಳಿವೆ. ಶುಕ್ಲಯಜುರ್ವೇದಕ್ಕೆ ಈಶಾವಾಸ್ಯೋಪನಿಷತ್ತು, ಬ್ರಹದಾರಣ್ಯ ಕೋಪನಿಷತ್ತುಗಳಿವೆ. ವಸ್ತುತಃ ಶುಕ್ಲಯಜುರ್ವೇದಕ್ಕೆ ಆರಣ್ಯಕವೇ ಇಲ್ಲ. ಆದುದರಿಂದ ಬೃಹದಾರಣ್ಯಕೋಪನಿಷತ್ತನ್ನೇ ಆರಣ್ಯಕವೆಂದು ತಿಳಿಯುತ್ತಾರೆ.

(ಮುಂದುವರಿಯುವುದು...)

# ಮನೋಹರ್ ಪ್ರಸಾದ್‌ರಿಗೆ ಸರ್ವೋತ್ಕೃಷ್ಟ ಸಾಧನಾಶೀಲ ಪ್ರಶಸ್ತಿ



ಉದಯವಾಣಿ ದಿನಪತ್ರಿಕೆಯ ಮಂಗಳೂರು ಸುದ್ದಿ ವಿಭಾಗದ ಮುಖ್ಯಸ್ಥರಾದ ಮನೋಹರಪ್ರಸಾದ್ ಇವರಿಗೆ ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಲ್ಲಿಸಿರುವ ಗಣನೀಯ ಸೇವೆಗಾಗಿ ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯ ರೋಟರಿ ನ್ಯೂಸ್ ಟ್ರಸ್ಟ್‌ನವರು ಸರ್ವೋತ್ಕೃಷ್ಟ ಸಾಧನಾಶೀಲ ಪ್ರಶಸ್ತಿ (ಅವಾರ್ಡ್ ಆಫ್ ಎಕ್ಸಲೆನ್ಸ್)ಯನ್ನು ನೀಡಿ ಪುರಸ್ಕರಿಸಿದೆ. ಪ್ರಶಸ್ತಿಯು ಪ್ರಶಂಸನಾಪತ್ರ, ಫಲಕ ಮತ್ತು ರೂ.5,000/- ನಗದನ್ನು ಹೊಂದಿದ್ದು, ಸೆ.16ರಂದು ಸಂಜೆ ಮಂಗಳೂರು ನಗರದ ಬಾಲಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಮನೋಹರ ಪ್ರಸಾದ್ ಅವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು

## ಹೊಸ ಬೆಳಕು

**ನಲ್ನುಡಿ :**

**ಅಮಂತ್ರಮಕ್ಷರಂ ನಾಸ್ತಿ। ವನಸ್ಪತಿರನೌಷಧಂ॥**
**ಅಯೋಗ್ಯೋ ಪುರುಷೋನಾಸ್ತಿ।**
**ಯೋಜಕಸ್ತತ್ರ ದುರ್ಲಭಃ॥**

*ಅಂದರೆ ಮಂತ್ರವಲ್ಲದ ಅಕ್ಷರವಿಲ್ಲ. ಔಷಧವಲ್ಲದ ಸಸ್ಯವಿಲ್ಲ. ಅಯೋಗ್ಯನಾದ ಮನುಷ್ಯನಿಲ್ಲ. ಆದರೆ ಉತ್ತಮ ಸಂಘಟಕನಂತೂ ಸಿಗುವುದು ವಿರಳ.*

**ಪುಸ್ತಕ ಪರಿಚಯ :**

**ಗುರುನಮನ**

**ಸಂಪಾದಕರು –ನಂದಳಿಕೆ ಬಾಲಚಂದ್ರ ರಾವ್**

ನಂದಳಿಕೆ ಎಂದಾಗ ಮೊದಲು ನೆನಪಿಗೆ ಬರುವುದು ನಂದಳಿಕೆ ಮುದ್ದಣ. ಮುದ್ದಣನ ಅಭಿಮಾನಿ, ಮುದ್ದಣನದೇ ಊರಿನ ನಂದಳಿಕೆ ಬಾಲಚಂದ್ರ ರಾವ್ ಇವರು 'ನಂದಳಿಕೆಯ ನಂದಾದೀಪ', 'ನಂದಳಿಕೆ ನಂದನ' ಮೊದಲಾದ ಕೃತಿಗಳನ್ನು ನೀಡಿದ್ದಾರೆ. ಇವರ ಸಂಪಾದಿತ ಕೃತಿ 'ಗುರುನಮನ'. (ಪ್ರೊ. ಎಂ. ಎ. ರಾಮಚಂದ್ರ ರಾವ್ ಅವರಿಗೆ ಅಕ್ಷರಾಂಜಲಿ) ಬಾಲಚಂದ್ರ ರಾವ್ 'ನಿವೇದನೆ'ಯಲ್ಲಿ ಹೇಳಿದಂತೆ – "ಗುರುಗಳಾದ ಪ್ರೊ. ಎಂ. ಎ. ರಾಮಚಂದ್ರ ರಾವ್ ಜ್ಞಾನಸಂಪನ್ನ ಪ್ರಾಧ್ಯಾಪಕರಾಗಿದ್ದರು. ಮಂಗಳೂರು, ಮಡಿಕೇರಿ, ತುಮಕೂರುಗಳಲ್ಲಿ ಪ್ರಾಂಶುಪಾಲರಾಗಿ ಉತ್ತಮ ಆಡಳಿತ ನೀಡಿದ್ದರು. ಮಂಗಳೂರು ಸರಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿರುತ್ತ ಶತಮಾನ ಭವನ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಕೇವಲ ನಾಲ್ಕು ಗೋಡೆಗಳ ನಡುವೆ ಪಾಠ ಹೇಳದೆ, ಸಾರ್ವಜನಿಕವಾಗಿಯೂ ತನ್ನ ಸೇವಾ ಸಾಮರ್ಥ್ಯವನ್ನು ದಾಖಲಿಸುವ ಹುಮ್ಮಸ್ಸಿನಿಂದ ಮಂಗಳೂರು ರೋಟರಿ ಕ್ಲಬ್ ಹಾಗೂ ಇನ್ನಿತರ ಸಂಘಟನೆಗಳೊಂದಿಗೆ ತನ್ನನ್ನು ತೊಡಗಿಸಿಕೊಂಡಿದ್ದರು. ಇಂಥ ಆದರ್ಶ ಗುರುವಿಗೆ ಅಕ್ಷರಾಂಜಲಿ ಸಲ್ಲಿಸುವುದು, ಆ ಮೂಲಕ ಅವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳನ್ನು ನೆನಪು ಮಾಡಿಕೊಳ್ಳುವುದೇ ಅಲ್ಲದೆ ಸಮಾಜದ ಪ್ರಜ್ಞಾವಂತ ಬಂಧುಗಳ ಗಮನಕ್ಕೆ ತರುವುದು ಈ ಕಿರುಕೃತಿಯ ಉದ್ದೇಶ. ಅವರ ಆದರ್ಶ ಗುಣಗಳು ನಮಗೂ ಬರಲಿ, ಮುಂದಿನ ಪೀಳಿಗೆಗೂ ಅವರ ನೆನಪು ಇರಲಿ ಎನ್ನುವುದು ನಮ್ಮೀ ಪ್ರಯತ್ನದ ಉದ್ದೇಶ".

ಡಾ. ಎಂ. ಪ್ರಭಾಕರ ಜೋಷಿಯವರು 'ಒಳ್ನುಡಿ'ಯಲ್ಲಿ ತಿಳಿಸಿರುವಂತೆ – "ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಶ್ರೀ ರಾಮಚಂದ್ರ ರಾಯರಿಗೆ ಇಸವಿ 2004 ವರ್ಷದ ಶಿಕ್ಷಕದಿನ ಪ್ರಶಸ್ತಿ ನೀಡುವ ಭಾಗ್ಯ ನಮ್ಮ ಮುದ್ರಣ ಪ್ರಕಾಶನಕ್ಕೆ ಲಭಿಸಿತ್ತು. ಇದೀಗ ಅವರ ಬದುಕು ಸಾಧನೆಗಳ ಕಿರುನೋಟವೊಂದನ್ನು ನೀಡುವ ಅವರ ಕೆಲವು ಆತ್ಮೀಯರ ಬರಹಗಳನ್ನೊಳಗೊಂಡ ಗುರುನಮನವನ್ನು ಮುದ್ದಣ ಪ್ರಕಾಶನವು ಪ್ರಕಾಶಿಸುತ್ತಿರುವುದು ಸಾಮಯಿಕವಾಗಿದೆ. ಇಂತಹ ಪ್ರಕಟಣೆಗಳೊಂದಿಗೆ ಒಂದು ಕ್ಷೇತ್ರದ ಒಂದು ಅವಧಿಯ ಬೆಳವಣಿಗೆಗಳು, ಅಲ್ಲಿ ದುಡಿದ ವ್ಯಕ್ತಿಗಳ ಸಾಧನೆಗಳು ದಾಖಲಾಗುತ್ತವೆ. ಮುಂದಿನವರಿಗೆ ಸ್ಫೂರ್ತಿಯಾಗುತ್ತದೆ. ಪ್ರಕಟಣೆಗಾಗಿ ಪ್ರಕಾಶನಕ್ಕೆ, ಸಾಂಸ್ಕೃತಿಕ ಸಂಘಟನಾ ಸಾಹಸಿ ಮಿತ್ರ ನಂದಳಿಕೆ ಅವರಿಗೆ ಅಭಿನಂದನೆಗಳು"

ಪ್ರೊ. ಜಿ.ಟಿ. ನಾರಾಯಣ ರಾವ್, ಮೈಸೂರು ; ಯು.ವಿ. ಶ್ರೀನಿವಾಸ ಮೂರ್ತಿ ; ಡಾ। ಜಿ.ಎನ್. ಭಟ್, ಬಿ.ಸಿ. ಪೊನ್ನಪ್ಪ, ವಿ. ವೆಂಕಟರಮಣ ರಾವ್ ; ಡಾ। ಪ್ರಭಾ ಅಧಿಕಾರಿ; ಡಾ। ಸಿ.ವಿ. ರಘುವೀರ್ ಮತ್ತು ನಂದಳಿಕೆ ಬಾಲಚಂದ್ರ ರಾವ್ ಇವರೆಲ್ಲರ ಮಹತ್ವದ ಲೇಖನಗಳು ಇಲ್ಲಿವೆ.

ಮುದ್ದಣ ಪ್ರಕಾಶನ, ಮುದ್ದಣ ಚಾವಡಿ, ಬಿಜೈ, ಮಂಗಳೂರು 'ಗುರುನಮನ' ಕೃತಿಯನ್ನು 'ಚಿತ್ರಾಂಜಲಿ' ಸಹಿತ ಮುದ್ದಾಗಿ ಪ್ರಕಟಿಸಿದೆ.

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ.